**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>**

**<u>ಕ್ರಿ ಮೊ ಸಂಖ್ಯೆ 428/2019</u>**

**<u>ಪಿರ್ಯಾದಿಃ</u>** **ಶ್ರೀ ಎನ್.ಎಸ್.ಲಿಂಗರಾಜು**

**-ವಿರುದ್ಧ-**

**<u>ಆರೋಪಿ/ತರುಃ</u>** **ಶ್ರೀ ಎ.ಎಂ.ರವಿಕುಮಾರ**

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ</u>**

ಪ್ರಶ್ನೆ-1: ನೀವು ಸಾಕ್ಷಿದಾರರ ಸಾಕ್ಷ್ಯದ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ: Yes

ಪ್ರಶ್ನೆ-2: ಪಿಡಬ್ಲೂ-1. ಶ್ರೀ ಎನ್.ಎಸ್.ಲಿಂಗರಾಜು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಕೃಷಿ ಭೂಮಿಯನ್ನು ಅಭಿವೃಧಿಪಡಿಸುವ ಸಲುವಾಗಿ ದಿನಾಂಕ 12.01.2019 ರಂದು ರೂ.6,00,000/- ಗಳನ್ನು ಶೇಕಡ 24 ರ ಬಡ್ಡಿ ದರದಲ್ಲಿ ಎರಡು ತಿಂಗಳ ಒಳಗಾಗಿ ವಾಪಸ್ಸು ನೀಡಲು ಒಪ್ಪಿ ಪಡೆದುಕೊಂಡು, ಅದೇದಿನ ದಿನಾಂಕ 12.03.2019 ರ ದಿನಾಂಕವನ್ನು ನಮೂದಿಸಿ ಕಾವೇರಿ ಗ್ರಾಮೀಣ ಬ್ಯಾಂಕ್, ಅಮೃತಾಪುರ ಶಾಖೆಗೆ ಸೇರಿದ ಚೆಕ್ ಸಂಖ್ಯೆ 942886 ನ್ನು ರೂ.6,00,000/- ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದಿಯು ಕೆನರಾ ಬ್ಯಾಂಕ್, ತರೀಕೆರೆ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯಲ್ಲಿ '**ಸಾಕಷ್ಟು ಹಣವಿಲ್ಲ**' ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿದೆ ಎಂದು ಹಿಂಬರಹ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-3: ಪಿಡಬ್ಲ್ಯೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅನಂತರ ಪಿರ್ಯಾದಿಯು ದಿನಾಂಕ 04.04.2019 ರಂದು ವಕೀಲರ ಮೂಲಕ ನೋಟೀಸ್ ನೀಡಿದ್ದು ಅದು ಆರೋಪಿಯಾದ ನಿಮಗೆ ತಲುಪಿದ ನಂತರ ದಿನಾಂಕ 25.04.2019 ರಂದು ನೋಟೀಸ್‌ಗೆ ಮರು ಉತ್ತರವನ್ನು ನೀಡಿರುತ್ತೀರಿ ಮತ್ತು ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-4: ಪಿಡಬ್ಲ್ಯೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮೋಸ ಮಾಡುವ ಉದ್ದೇಶದಿಂದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ವಿಚಾರ ತಿಳಿದಿದ್ದರೂ ಸದರಿ ಚೆಕ್ ನ್ನು ತನಗೆ ನೀಡಿರುತ್ತೀರಿ, ನಂತರ ತಾನು ಆರೋಪಿಯಾದ ನಿಮಗೆ ನೋಟೀಸು ನೀಡಿದ್ದರೂ ಸಹ ಆರೋಪಿಯಾದ ನೀವು ಸದರಿ ಸಾಲದ ಹಣವನ್ನು ಹಿಂತಿರುಗಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: False

ಪ್ರಶ್ನೆ-5: ನೀವು ಏನಾದರೂ ಹೇಳುವುದಿದೆಯಾ?
ಉತ್ತರ: Not at this moment

ಪ್ರಶ್ನೆ-6: ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿ/ಪ್ರತಿರಕ್ಷಣೆ ಏನಾದರೂ ಇದೆಯೇ?

ಉತ್ತರ: Yes

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಆರೋಪಿಯ ಉತ್ತರನ್ನು ಯಥಾವತ್ತಾಗಿ ದಾಖಲಿಸಿದ್ದೇನೆ.)

ದಿನಾಂಕ: 17.09.2025 **ಸಹಿ/-**

**(ರಾಹುಲ್ ಶೆಟ್ಟಿಗಾರ್)**
**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ**
**ಪ್ರ.ದ.ನ್ಯಾ.ದಂ., ತರೀಕೆರೆ.**